# ಸೋಲಾರ್ ಸೋಲಾರ್ ಎವೆರಿವೇರ್

ಇಂಧನದ ಹೊಸ ಸಾಧ್ಯತೆಗಳ ಬಗ್ಗೆ ಬಿಡುಗಣ್ಣಾಗಿರುವ ವಿಶ್ವಕ್ಕೆ 'ಸೌರ ವಿದ್ಯುತ್' ಅಕ್ಷಯಪಾತ್ರೆಯಂತೆ ಕಾಣಿಸುತ್ತಿದೆ. ಸೂರ್ಯದ ಬೆಳಕು ಮತ್ತು ಶಾಖದಿಂದ ವಿದ್ಯುತ್ ತಯಾರಿಸುವ ಪ್ರಯತ್ನಗಳು ವಿಶ್ವದೆಲ್ಲೆಡೆ ಚಾಲ್ತಿಯಲ್ಲಿವೆ. ಸೌರ ವಿದ್ಯುತ್ ಕ್ಷೇತ್ರದಲ್ಲಿ ಹೊಸ ಹೊಸ ಆವಿಷ್ಕಾರಗಳೂ ನಡೆಯುತ್ತಿವೆ. ಭೂಮಿಯ ಮೇಲಿನಿಂದ ಮಾತ್ರವಲ್ಲದೆ, ಸಮುದ್ರದ ಮೇಲೆ ಹಾಗೂ ಅಂತರಿಕ್ಷದಿಂದಲೂ ಸೂರ್ಯನ ಶಕ್ತಿಯನ್ನು ಸಂಗ್ರಹಿಸುವ ಪ್ರಯತ್ನಗಳು ನಡೆದಿವೆ. ಆದರೆ, 'ಸೂರ್ಯ ಶಿಕಾರಿ'ಯ ಜೊತೆಜೊತೆಗೇ ಸೌರ ವಿದ್ಯುತ್ ಉತ್ಪಾದನೆಯ ಯೋಜನೆಗಳಿಂದ ಸಮಸ್ಯೆಗಳೂ ತಲೆದೋರುತ್ತಿವೆ. ಸೌರ ವಿದ್ಯುತ್ ಯೋಜನೆಗಳು ಉಂಟುಮಾಡುತ್ತಿರುವ ಅಪಾರ ಪ್ರಮಾಣದ ತ್ಯಾಜ್ಯ ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿದೆ. ಸೌರ ಶಕ್ತಿಯನ್ನು 'ಗ್ರೀನ್ ಎನರ್ಜಿ'ಯಾಗಿ ಬದಲಿಸಬೇಕಾಗಿರುವುದು ಸದ್ಯಕ್ಕೆ ವಿಶ್ವದ ಮುಂದಿರುವ ಸವಾಲು.

■ ಗುರುರಾಜ್ ಎಸ್. ದಾವಣಗೆರೆ

